ದೂರವಾಣಿ ಸಂಖ್ಯೆ : 080-22212343
ಫ್ಯಾಕ್ಸ್ ಸಂಖ್ಯೆ : 080-22278803
Website : https://kptcl.karnataka.gov.in

ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521
ಕಂಪನಿಯ ಅಧಿಕೃತ ಕಛೇರಿ : ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು-560 009

ಸಂಖ್ಯೆ: ಕವಿಪ್ರನಿನಿ/ಬಿ16/ಇತರೆ-2/2014-15 (ಬಿ) ದಿನಾಂಕ: 13 JUL 2022

## ಸುತ್ತೋಲೆ

**ವಿಷಯ:** ಶೇಕಡ 17.5 ರ ತಾಂತ್ರಿಕ ಕೋಟಾದಡಿಯಲ್ಲಿರುವ ನೌಕರರು ಕಿರಿಯ ಇಂಜಿನಿಯರ್(ವಿ) ಹುದ್ದೆಯ ಪದೋನ್ನತಿಗಾಗಿ ಎಕ್ಸಿಕ್ಯೂಟಿವ್ ಲೋಯರ್ ಇಲಾಖಾ ಪರೀಕ್ಷೆಯನ್ನು ತೆಗೆದುಕೊಳ್ಳುವ ಬಗ್ಗೆ.

**ಉಲ್ಲೇಖ:** ನಿಗಮದ ಸುತ್ತೋಲೆ ಸಂಖ್ಯೆ: ಕವಿಪ್ರನಿನಿ/ಬಿ16/ಇತರೆ/2014-15 ದಿನಾಂಕ: 10.05.2017, 14.03.2018. 14.11.2018.

***

ಹಾಲಿ ಚಾಲ್ತಿಯಲ್ಲಿರುವ ನಿಯಮಾನುಸಾರ ಕಿರಿಯ ಇಂಜಿನಿಯರ್(ವಿ) ಹುದ್ದೆಯ ಬಡ್ತಿಗಾಗಿ ಐ.ಟಿ.ಐ/ಐ.ಟಿ.ಸಿ ವಿದ್ಯಾರ್ಹತೆಯ ಮೇರೆಗೆ ನೇರ ನೇಮಕಾತಿ ಹೊಂದಿದ ನೌಕರರನ್ನು ತಾಂತ್ರಿಕ ಕೋಟಾದಡಿಯಲ್ಲಿ ಪರಿಗಣಿಸಬೇಕಾಗಿರುತ್ತದೆ. ಆದರೆ ಕೆಲವು ವೃತ್ತಗಳಲ್ಲಿ ಐ.ಟಿ.ಐ/ಐ.ಟಿ.ಸಿ ವಿದ್ಯಾರ್ಹತೆಯ ಮೇಲೆ ಮಾಪಕ ಓದುಗ/ಆಪರೇಟರ್/ಓವರ್ ಸೀಯರ್/ಸಹಾಯಕ ಉಗ್ರಾಣ ಪಾಲಕ ಹುದ್ದೆಗೆ ನೇರ ನೇಮಕ ಹೊಂದಿದ ನೌಕರರನ್ನು ಮಾತ್ರ ತಾಂತ್ರಿಕ ಕೋಟಾದಡಿಯಲ್ಲಿ ಪರಿಗಣಿಸಲಾಗುತ್ತಿದ್ದು, ಐ.ಟಿ.ಐ/ಐ.ಟಿ.ಸಿ/ಜೆ.ಓ.ಡಿ.ಸಿ ವಿದ್ಯಾರ್ಹತೆಯ ಮೇರೆಗೆ ಸಹಾಯಕ ಪವರ್ ಮ್ಯಾನ್ ಹಾಗೂ ಸ್ಟೇಷನ್ ಪರಿಚಾರಕ ದರ್ಜೆ-2 ಹುದ್ದೆಗಳಿಗೆ ನೇರ ನೇಮಕಾತಿ ಹೊಂದಿದ ನೌಕರರನ್ನು ತಾಂತ್ರಿಕವಲ್ಲದ ಕೋಟಾದಡಿಯಲ್ಲಿ ಪರಿಗಣಿಸುತ್ತಿರುವುದು ನಿಗಮದ ಗಮನಕ್ಕೆ ಬಂದಿರುತ್ತದೆ. ಇದು ನಿಗಮದ ನಿರ್ದೇಶನಗಳಿಗನುಸಾರ ಕ್ರಮಬದ್ಧವಾಗಿರುವುದಿಲ್ಲ.

ಮುಂದುವರೆಯುತ್ತಾ, ನಿಗಮದ ನೌಕರಿ ಭರ್ತಿ ಮತ್ತು ಬಡತಿ ನಿಯಮಗಳ ಪ್ರಕಾರ ಶೇಕಡ 17.5 ರ ತಾಂತ್ರಿಕ ಕೋಟಾದಡಿಯಲ್ಲಿ ಪರಿಗಣಿಸಲಾಗುತ್ತಿರುವ ನೌಕರರು ಕಿರಿಯ ಇಂಜಿನಿಯರ್(ವಿ) ಹುದ್ದೆಗೆ ಬಡ್ತಿ ಹೊಂದಲು ಎಕ್ಸಿಕ್ಯೂಟಿವ್ ಲೋಯರ್ ಇಲಾಖಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕಿರುತ್ತದೆ.

ಈ ಸಂಬಂಧ, ನಿಗಮದ ಉಲ್ಲೇಖಿತ ಸುತ್ತೋಲೆಗಳಲ್ಲಿ ಅಗತ್ಯ ನಿರ್ದೇಶನಗಳನ್ನು ನೀಡಲಾಗಿರುತ್ತದೆ. ಆದಾಗ್ಯೂ, ಮಾಪಕ ಓದುಗ/ಆಪರೇಟರ್/ಓವರ್ ಸೀಯರ್/ಸಹಾಯಕ ಉಗ್ರಾಣ ಪಾಲಕ ಹುದ್ದೆಯಿಂದ ಕಿರಿಯ ಇಂಜಿನಿಯರ್(ವಿ) ಹುದ್ದೆಯ ಪದೋನ್ನತಿಗೆ ಪರಿಗಣಿಸುವಾಗ ಐ.ಟಿ.ಐ/ಐ.ಟಿ.ಸಿ/ಜೆ.ಓ.ಡಿ.ಸಿ ವಿದ್ಯಾರ್ಹತೆಯ ಮೇರೆಗೆ ಸಹಾಯಕ ಪವರ್ ಮ್ಯಾನ್ ಹಾಗೂ ಸ್ಟೇಷನ್ ಪರಿಚಾರಕ ದರ್ಜೆ-2 ಹುದ್ದೆಗಳಿಗೆ ನೇರ ನೇಮಕಾತಿ ಹೊಂದಿದ ನೌಕರರನ್ನು ಸಹ ಶೇಕಡ 17.5 ರ ತಾಂತ್ರಿಕ ಕೋಟಾದಡಿಯಲ್ಲಿ ಪರಿಗಣಿಸುವಂತೆಯೂ ಹಾಗೂ ಸದರಿಯವರು ಎಕ್ಸಿಕ್ಯೂಟಿವ್ ಲೋಯರ್ ಇಲಾಖಾ ಪರೀಕ್ಷೆಯನ್ನು ತೆಗೆದುಕೊಳ್ಳಲು ಅರ್ಹರಾಗಿರುತ್ತಾರೆ ಎಂದು ಈ ಮೂಲಕ ಮತ್ತೊಮ್ಮೆ ತಿಳಿಸಲಾಗಿದೆ.

ನಿರ್ದೇಶಕರು
(ಆಡಳಿತ ಮತ್ತು ಮಾನವ ಸಂಪನ್ಮೂಲ)

ಗೆ:

1. ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ/ಜೆಸ್ಕಾಂ/ಹೆಸ್ಕಾಂ/ಮೆಸ್ಕಾಂ/ಸೆಸ್ಕ್/ಪಿ.ಸಿ.ಕೆ.ಎಲ್.

2. ಎಲ್ಲಾ ನಿರ್ದೇಶಕರು (ತಾಂತ್ರಿಕ), ಎಸ್ಕಾಂಗಳು.
3. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ಎಸ್ಕಾಂಗಳು.
4. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕವಿಪ್ರನಿನಿ/ಎಸ್ಕಾಂಗಳು.
5. ಹಿರಿಯ ಆಪ್ತ ಕಾರ್ಯದರ್ಶಿಗಳು, ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ಪ್ರಸರಣ)/ನಿರ್ದೇಶಕರು(ಹಣಕಾಸು)/ನಿರ್ದೇಶಕರು(ಆಡಳಿತ ಮತ್ತು ಮಾನವ ಸಂಪನ್ಮೂಲ), ಕವಿಪ್ರನಿನಿ.

https://kptcl.karnataka.gov.in for information of:

6. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ)/ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ/ಎಸ್ಕಾಂಗಳು.
7. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ)/ಉಪ ಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ/ಎಸ್ಕಾಂಗಳು
8. ಎಲ್ಲಾ ಅಧಿಕಾರಿಗಳು, ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

**ಪ್ರತಿಯನ್ನು ಮಾಹಿತಿಗಾಗಿ ರವಾನಿಸಿದೆ:-**

1. ಶ್ರೀ.ಆರ್.ಹೆಚ್.ಲಕ್ಷ್ಮೀಪತಿ, ಅಧ್ಯಕ್ಷರು, ಕವಿಪ್ರನಿ ನೌಕರರ ಸಂಘ (ನೋ.ಸಂ: 659), ಬೆಂಗಳೂರು ಮತ್ತು ನಿರ್ದೇಶಕರು, ಕವಿಪ್ರನಿನಿ ಹಾಗೂ ಎಲ್ಲಾ ಎಸ್ಕಾಂಗಳು.
2. ಶ್ರೀ.ಟಿ.ಎಂ.ಶಿವಪ್ರಕಾಶ್, ಅಧ್ಯಕ್ಷರು, ಕವಿಮಂ ಇಂಜಿನಿಯರುಗಳ ಸಂಘ, ಬೆಂಗಳೂರು ಮತ್ತು ನಿರ್ದೇಶಕರು, ಕವಿಪ್ರನಿನಿ ಹಾಗೂ ಎಲ್ಲಾ ಎಸ್ಕಾಂಗಳು.
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ (ನೋ.ಸಂ: 659), ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರುಗಳ ಸಂಘ, ಬೆಂಗಳೂರು.
5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಕವಿಮಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ (ರಿ), ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಡಿಪ್ಲೊಮಾ ಇಂಜಿನಿಯರುಗಳ ಸಂಘ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ /ಎಸ್ಕಾಂ ಪ.ಜಾ/ಪ.ಪಂ ಅಧಿಕಾರಿಗಳ ಸಂಘ, ಬೆಂಗಳೂರು.